ಸಣ್ಣ ಕೈಗಾರಿಕಾ ಘಟಕಗಳಿಗೆ ಸಹಾಯಧನ

3108 (3615) : ಶ್ರೀ ಲಕ್ಷ್ಮೀ ನಾರಾಯಣ (ತುರುವೇಕೆರೆ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಎಷ್ಟು? ವರ್ಷವಾರು ವಿವರ ನೀಡುವುದು?

ಆ) ಆಯಾ ವರ್ಷ ಕೊಡಬೇಕಾಗಿದ್ದ ಸಹಾಯಧನವನ್ನು ನೀಡದಿರಲು ಕಾರಣವೇನು?

ಇ) ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದಾಗಿ ಭರವಸೆ ಕೊಟ್ಟ ಸರ್ಕಾರ ಈ ರೀತಿ ಮಾಡಲು ಕಾರಣವೇನು?

ಈ) ಸಹಾಯಧನಕ್ಕೆ ಇಟ್ಟಿರುವ ಹಣವನ್ನು ಬೇರೆ ಇಲಾಖೆಗೆ ವರ್ಗಾಯಿಸಿದೆಯೇ;

ಉ) ಈ ವರ್ಷದ ಅನುದಾನದಲ್ಲಿ ಕೊಡಲಾಗುವುದೇ?

ಶ್ರೀ ಆರ್ ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ದಿನಾಂಕ: 01.01.1991 ರಿಂದ 31.3.2003ರ ಅಂತ್ಯಕ್ಕೆ 18279 ಸಣ್ಣ ಕೈಗಾರಿಕೆಗಳಿಗೆ ರೂ. 405.67 ಕೋಟಿಗಳ ಸಹಾಯಧನ ಬಾಕಿ ಇದೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ).

ಆ) ಮಿತಿಗೊಳಿಸಿದ ಆಯವ್ಯಯದಿಂದ ಮಂಜೂರಾದ ಸಹಾಯ ಧನವನ್ನು ನಿಯಮಿತ ಕಾಲದಲ್ಲಿ ಬಿಡುಗಡೆಗೊಳಿಸಲು ಸಾಧ್ಯವಾಗದ ಕಾರಣ, ಹೆಚ್ಚಿನ ಸಹಾಯಧನದ ಮೊತ್ತದ ಬಾಕಿ ಶೇಖರಣೆಯಾಗಿರುವುದೇ ಮುಖ್ಯ ಕಾರಣವಾಗಿದೆ.

ಇ) ಸಹಾಯಧನವನ್ನು ಆದಷ್ಟು ಬೇಗನೆ ಬಿಡುಗಡೆಗೊಳಿಸಲು ವಿಶೇಷ ಪ್ರಯತ್ನವನ್ನು ಮಾಡಲಾಗುತ್ತಿದೆ.

ಈ) 2002–03ರ ಆಯವ್ಯಯದಲ್ಲಿ ನಿಗಧಿಪಡಿಸಲಾದ ರೂ. 16.20 ಕೋಟಿ ಮೊತ್ತದಲ್ಲಿ ಕೇವಲ ರೂ. 5.00 ಕೋಟಿಗಳ ಸಹಾಯಧನವನ್ನು ಬಿಡುಗಡೆಗೊಳಿಸಿ ರೂ. 4.35 ಕೋಟಿಗಳನ್ನು ಜವಳಿ ಇಲಾಖೆ ಮತ್ತು ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿಗೆ ಮರುಹೊಂದಾಣಿಕೆ ಮಾಡಲಾಯಿತು. ಉಳಿದ ಮೊತ್ತವನ್ನು ಸ್ಥಗಿತಗೊಳಿಸಿದ ಆಯವ್ಯಯದಿಂದಾಗಿ ಬಿಡುಗಡೆಗೊಳಿಸಲಾಗಲಿಲ್ಲ.

ಉ) ಹೆಚ್ಚಿನ ಅನುದಾನವನ್ನು ಒದಗಿಸಲು ವಿಶೇಷ ಪ್ರಯತ್ನವನ್ನು ಮಾಡಲಾಗುತ್ತಿದೆ. ರೂ. 12.56 ಕೋಟಿಗಳನ್ನು 2003–04ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿದೆ.

Districtwise details of State Investment subsidy pendency as on March 2003.

Sl. No.	Name of the District	Total No. of units	Amount
1	2	3	4
1	Bangalore (U)	1349	6353.38
2	Bangalore (R)	1750	5196.97
3	Bagalkot	401	715.87

1	2	3	4
4	Belgaum	1448	1955.28
5	Bellary	602	1557.28
6	Bidar	554	521.25
7	Bijapur	503	779.11
8	Chamarajnagar	223	266.93
9	Chitradurga	411	806.05
10	Chickmagalur	281	427.53
11	Davanagere	302	678.24
12	Dharwad	704	1518.14
13	D.K	874	1787.23
14	Gadag	320	333.59
15	Gulbarga	429	1028.54
16	Hassan	576	844.57
17	Haveri	237	286.00
18	Karwar	1154	1809.27
19	Kodagu	150	378.03
20	Kolar	1625	3662.06
21	Koppal	235	985.35
22	Mandya	401	576.81
23	Mysore	913	2452.00
24	Raichur	242	616.61
25	Shimoga	421	695.91
26	Tumkur	1269	2681.62
27	Udupi	905	1653.75
	Total	18279	40567.36

ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುವುದು

3110 (3617) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಲು ಕೋರಿಕೆಗಳೆಷ್ಟು;

ಆ) ಗ್ರಾಮಾಂತರ ಹಳ್ಳಿಗಳಲ್ಲಿ ತುಂಬಾ ದೂರ ಕ್ರಮಿಸಿ ಜಾನುವಾರುಗಳಿಗೆ ಔಷಧ ಕೂಡಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;